ಶ್ರೀ ಡಿ.ಟಿ. ಜಯಕುಮಾರ್ : ಈಗಾಗಲೇ ನಾವು ವಿಶೇಷವಾಗಿ ಸಮಗ್ರ ಯೋಜನೆಯನ್ನು ತಯಾರಿಸಿದ್ದು, ಸುಮಾರು ಅರವತ್ತಾರೂವರೆ ಕೋಟಿ ರೂಪಾಯಿಗಳ ಯೋಜನೆಯಲ್ಲಿ ತೋಟಗಾರಿಕೆ ಉತ್ಪನ್ನಗಳ ಪರಿಷ್ಕರಣೆ, ಸಂಸ್ಕರಣೆ ಸಂಗ್ರಹಣೆ

ಮುಂತಾದವುಗಳನ್ನೊಳಗೊಂಡಂತೆ ಇರುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಒಪ್ಪಿದೆ. ಅದೇ ರೀತಿ ನೂರು ಕೋಟಿ ರೂಪಾಯಿಗಳ ಒಂದು ಯೋಜನಾ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಈಗಾಗಲೇ 66 ಕೋಟಿಗೆ ಕೇಂದ್ರ ಸರ್ಕಾರ ಒಪ್ಪಿದೆ. ಅದರ ಪ್ರಕಾರ ನಾನು ಉತ್ತರ ಕೊಟ್ಟಿದ್ದೇವೆ. ಬೆಂಗಳೂರಿನ ಹಡ್ಸನ್ ವೃತ್ತದಲ್ಲಿ ನಿರ್ಮಿಸಿರುವ ಶೈತ್ಯಾಗಾರದ ಕುರಿತು ತಾವು ಹೇಳಿದಿರಿ. ನೀವು ಹೇಳುತ್ತಿರುವುದು ನಿಜ. ಸದರಿ ಶೈತ್ಯಾಗಾರವನ್ನು ಸರಿಯಾದಂಥ ರೀತಿಯಲ್ಲಿ ದುರಸ್ತಿ ಮಾಡಿಕೊಟ್ಟಿರುವುದಿಲ್ಲ, ಅಲ್ಲದೆ, ಮುಂಗಡವಾಗಿ ಹಣ ಕೊಟ್ಟಿರುವುದೂ ನಿಜ. ಆದರೆ, ಯಾವ ರೂಪದಲ್ಲಿ ಹಣ ಕೊಟ್ಟಿದ್ದಾರೆಂದು ಬಿಡಿಸಿ ಹೇಳಿರುವುದರಿಂದ ಆ ಕುರಿತು ಮಾಹಿತಿ ತರಿಸಿ ಪರಿಶೀಲಿಸಿ ಯಾರು ತಪ್ಪೆಸಗಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ತಯಾರಿದ್ದೇನೆ.

ಉಳ್ಳೂರು– ಮಚ್ಚಟ್ಟು ವ್ಯವಸಾಯ ಸಹಕಾರ ಸಂಘದ ಅವ್ಯವಹಾರ

191 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳೂರು ಮಚ್ಚಟ್ಟು ವ್ಯವಸಾಯ ಸೇವಾ ಸಹಕಾರ ನಾಮನಿರ್ದೇಶನ ಮಾಡಿದ ಸದಸ್ಯರನ್ನು ಹೊರಗಿಟ್ಟು ಆಡಳಿತ ಮಂಡಳಿಯ ಸಭೆಯನ್ನು ಕರೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಆಡಳಿತ ಮಂಡಳಿಯ ಸಭೆಯು ಅಕ್ರಮವಾಗಿ ನಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಅಕ್ರಮವನ್ನು ಸರಿಪಡಿಸಲು ತನಿಖೆ ನಡೆಸಲು ಸರಕಾರ ಆದೇಶಿಸುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಸಂಘದ ಆಡಳಿತ ಮಂಡಳಿ ಸಭೆಗಳನ್ನು ಸರ್ಕಾರದ ನಾಮನಿರ್ದೇಶಿತ ಸದಸ್ಯರನ್ನೊಳಗೊಂಡು ನಡೆಸಲಾಗುತ್ತಿದೆ.

ಆ) ಸಂಘದ ಆಡಳಿತ ಮಂಡಳಿ ಸಭೆಗಳು ಅಕ್ರಮವಾಗಿ ನಡೆದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಉಪ ಪ್ರಶ್ನೆ ಕೇಳುವಂಥಾದ್ದು ಏನೂ ಇಲ್ಲ, ನಾನು ಕೇಳಿರುವ ಪ್ರಶ್ನೆಗಳಿಗೆಲ್ಲಾ 'ಇಲ್ಲ' ವೆಂದು ಉತ್ತರಿಸಿದ್ದಾರೆ. ಇದುವರೆವಿಗೂ ಕೂಡ ನನ್ನ ಪ್ರಶ್ನೆಗಳಿಗೆ ಇದೇ ರೀತಿ 'ಇಲ್ಲ' ವೆಂದು ಕೊಟ್ಟಿರುವ ಉತ್ತರಗಳನ್ನು ಸತತವಾಗಿ ನೋಡುತ್ತಿದ್ದೇನೆ. ನಿನ್ನೆಯೂ ಕೂಡ ಪ್ರಶ್ನೋತ್ತರ ಕಾಲದಲ್ಲಿ ಇಂತಹ ತಾಲ್ಲೂಕಿನಲ್ಲಿ ಇಂತಹ ಗ್ರಾಮದಲ್ಲಿ ಗ್ರಾನೈಟ್ ಲೂಟಿಯಾಗುತ್ತಿದೆಯೇ? ಎಂದು ಕೇಳಿದ್ದಕ್ಕೆ ಅದಕ್ಕೂ 'ಇಲ್ಲ'ವೆಂದು ಉತ್ತರ ಕೊಟ್ಟರು. ಇವೊತ್ತು ವ್ಯವಸಾಯ ಸೇವಾ ಸಹಕಾರ ಸಂಘದ ಕುರಿತು ಪ್ರಶ್ನೆಗಳನ್ನು ಕೇಳಿರುವುದಕ್ಕೆ ಅದೇ ರೀತಿಯ ಉತ್ತರಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು ನಿಮ್ಮ ಜನ್ಮ ಕುಂಡಲಿಯನ್ನು ಸ್ವಲ್ಪ ಪರೀಕ್ಷೆ ಮಾಡಿಸಿ. ಏಕೋ ನೀವು ಕೇಳಿರುವ ಪ್ರಶ್ನೆಗಳಿಗೆಲ್ಲಾ ಉತ್ತರವಾಗಿ 'ಇಲ್ಲ'ವೆಂದು ಬರುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನನ್ನ ಪ್ರಶ್ನೆಯೇನೆಂದರೆ, ಉಳ್ಳೂರು-ಮಚಟ್ಟು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಸಹಕಾರ ನಾಮ ನಿರ್ದೇಶನ ಮಾಡಿದ ಸದಸ್ಯರನ್ನು ಹೊರಗಿಟ್ಟು ಆಡಳಿತ ಮಂಡಳಿಯ ಸಭೆಯನ್ನು ಕರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದಿದ್ದಕ್ಕೆ ಉತ್ತರವಾಗಿ 'ಸಂಘದ ಆಡಳಿತ ಮಂಡಳಿ ಸಭೆಗಳನ್ನು ಸರ್ಕಾರದ ನಾಮ ನಿರ್ದೇಶಿತ ಸದಸ್ಯರನ್ನೊಳಗೊಂಡು ನಡೆಸಲಾಗುತ್ತಿದೆ' ಎಂದಿದ್ದಾರೆ. ಆ ಸಂಘದ ಸದಸ್ಯರು ಹೇಳಿದ್ದಾರೆ. ನಮಗೆ 26.11.1995 ರಂದು ನೋಟೀಸ್ ಬಂದಿದ್ದು, ಅದರಲ್ಲಿ ಯಾವ ದಿನಾಂಕದ ಸಮಯಕ್ಕೆ ಸಭೆ ಕರೆಯಲಾಗಿದೆಯೆಂದು ನಮೂದಿಸಿರುವುದಿಲ್ಲವೆನ್ನುವ ವಿಚಾರ ಹೇಳಿದ್ದಾರೆ. ಇದರ ಜೊತೆಗೆ 13.1.1996ರಂದುಸಭೆ ಕರೆಯದೆ, ಸಭೆ ಕರೆದಿದೆ ಎನ್ನತಕ್ಕ ದಾಖಲಾತಿಗಳೊಂದಿಗೆ ಸಭೆ ನಡೆಸಲಾಗಿದೆ.ಆದರೂ ಇದು ಬಹಳ ಸಮರ್ಪಕವಾಗಿದೆಯೆಂದು ಸಚಿವರು ಉತ್ತರ ಕೊಟ್ಟಿದ್ದಾರೆ. ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಇಬ್ಬರು ಕಾರ್ಯದರ್ಶಿಗಳಿದ್ದು, ಅವರ ಕೋಣೆಗೆ ಬೀಗ ಹಾಕಿದ್ದು, ಇಷ್ಟೆಲ್ಲಾ ಆಗಿದ್ದರೂ ಸರಿಯಾಗಿದೆ, ಸಮರ್ಪಕವಾಗಿದೆಯೆಂಬ ಉತ್ತರವನ್ನು ಕೊಡುವುದಾದರೆ ನಾನು ಪ್ರಶ್ನೆ ಕೇಳುವಂಥ ಔಚಿತ್ಯವಾದರೂ ಏನು?

ಶ್ರೀಮತಿ ಲೀಲಾದೇವಿ ವಿ.ಆರ್. ಪ್ರಸಾದ್ (ಸಹಕಾರ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾಮ ನಿರ್ದೇಶನ ಹೊಂದಿರತಕ್ಕ ಎಲ್ಲಾ ಸದಸ್ಯರು 4-5 ಸಭೆಗಳಿಗೆ ಹಾಜರಾಗಿದ್ದು, ದಿನಾಂಕ 13.1.96ರಂದು ನಡೆಸಿದ ಸಭೆಗೆ ಮುಂಚಿತವಾಗಿ ನೋಟೀಸ್ ಕೊಡದಿರುವುದರಿಂದ " ಅವರು ಹಾಜರಾಗಿರುವುದಿಲ್ಲ. ಇದರ ಬಗ್ಗೆ ಈಗಾಗಲೇ ಇಲಾಖೆಯವರು ಆದೇಶ ಕೊಟ್ಟು ತನಿಖೆ ನಡೆಸಲಾಗುತ್ತಿದ್ದು, ಉಳಿದ ಎಲ್ಲಾ ಸಭೆಗಳಿಗೂ ನಾಮ ನಿರ್ದೇಶನ ಹೊಂದಿರುವ ಸದಸ್ಯರುಗಳು ಹಾಜರಾಗಿದ್ದಾರೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಈ ರೀತಿ ಆಪಾದನೆ ಮಾಡುತ್ತಿರುವುದು ನಾನಲ್ಲ, ನಾನು ಆ ವ್ಯವಸಾಯ ಸೇವಾ ಸಹಕಾರ ಸಂಘದ ಸದಸ್ಯನಲ್ಲ, ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಾಮ ನಿರ್ದೇಶನ ಹೊಂದಿದ ಸದಸ್ಯರನ್ನಾಗಿ ಆಯ್ಕೆ ಮಾಡಿದ್ದರೂ ಅವರು ಒದಗಿಸಿರುವ ಮಾಹಿತಿಯ ಆಧಾರದ ಮೇಲೆ ನಾನು ಈ ಪ್ರಶ್ನೆ ಕೇಳುತ್ತಿದ್ದೇನೆ. ಈಗ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಾಮ ನಿರ್ದೇಶನ ಹೊಂದಿರುವ ಸದಸ್ಯರನ್ನಾಗಿ ಏನು ಆಯ್ಕೆ ಮಾಡಿದ್ದೀರಿ, ಅವರ ಮಾತನ್ನು ನೀವು ನಂಬುತ್ತೀರಿ, ನಾನೂ ನಂಬಬೇಕಾಗುತ್ತದೆ. ಆದರೆ, ಮಾನ್ಯ ಸಚಿವರು ಅಂಕಿ-ಸಂಖ್ಯೆ ಇಟ್ಟುಕೊಂಡು ಉತ್ತರಿಸುತ್ತಿದ್ದಾರೆ.

ಶ್ರೀಮತಿ ಲೀಲಾದೇವಿ ವಿ.ಆರ್. ಪ್ರಸಾದ್ : ಈಗಾಗಲೇ ನಡೆಸಲಾಗಿರುವ 5-6 ಸಭೆಗಳಿಗೆ ಎಲ್ಲಾ ಸದಸ್ಯರೂ ಹಾಜರಾಗಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರ ಪ್ರಶ್ನೆಯೇನೆಂದರೆ, ನೀವೇ ನಾಮಕರಣ ಮಾಡಿರುವಂಥ ನಿರ್ದೇಶಕರುಗಳು ಹೇಳಿರುವ ಆಧಾರದ ಮೇಲೆ ಆ ಸಂಬಂಧವಾದ ದೂರು ಕೊಟ್ಟಿದ್ದಾರೆ. ಇಲ್ಲದಿದ್ದರೆ ನನಗೇನು ಕಾರಣವಿರುತ್ತದೆ, ಅಲ್ಲದೆ, ನಾನು ಆ ಸಹಕಾರ ಸಂಘದ ಸದಸ್ಯನೂ ಅಲ್ಲವೆಂದು ಹೇಳುತ್ತಿದ್ದಾರೆ. ಅಧಿಕಾರಿಗಳು ತಮಗೆ ಉತ್ತರ ಕೊಡುವಾಗ ಕೆಲವು ಸಲ ಈ ರೀತಿ ಮಾಡುವುದು ಸಾಧ್ಯವಿದೆಯಾದ್ದರಿಂದ ದಯಮಾಡಿ ಪರಿಶೀಲಿಸಿ. They you come back to the House.

ಶ್ರೀಮತಿ ಲೀಲಾದೇವಿ ವಿ.ಆರ್. ಪ್ರಸಾದ್ : ಇದರ ಬಗ್ಗೆ ಪುನಃ ಪರಿಶೀಲಿಸಿ ತಮಗೆ ತಿಳಿಸುತ್ತೇನೆ.

ಅಧ್ಯಕ್ಷರು : ಅವರು ಹೇಳಿರತಕ್ಕಂಥಾದ್ದು ನಿಜವಾದರೆ ನೀವು ಆ ಸದಸ್ಯರಿಗೆ ಸುದ್ದಿ ಕೊಟ್ಟು ಅವರನ್ನು ಕರೆಸಿಕೊಳ್ಳಿ. ಆ ವಿಷಯ ನಿಜವಾಗಿದ್ದರೆ ಯಾರು ನಿಮಗೆ

ಸರಿಯಾಗಿರದ ಮಾಹಿತಿ ಕೊಟ್ಟಿದ್ದಾರೋ You keep those Officers under suspension so that they do not respect.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ತಾವು ಸ್ವಲ್ಪ ಮುಂದೂಡಿ....

Mr. SPEAKER : We found a solution itself.

10.50 ಎ.ಎಂ

ಅಧ್ಯಕ್ಷರು : ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಮಂಜುನಾಥ್(ಉನ್ನತ ಶಿಕ್ಷಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 23ನೇ ಫೆಬ್ರವರಿ 1996ರ ಲಿಖಿತ ಮೂಲಕ ಉತ್ತರಿಸುವ ಐವತ್ತಾರು ಪ್ರಶ್ನೆಗಳ ಪೈಕಿ ಇಪ್ಪತ್ತೆಂಟು ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ರಾಜ್ಯದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ ಡಿವಿಜನ್‌ಗಳು

462 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಬಸ್ಸು ಡಿವಿಜನ್‌ಗಳಿವೆ (ಜಿಲ್ಲಾವಾರು ಡಿವಿಜನ್‌ಗಳ ವಿವರ ನೀಡುವುದು)

ಆ) ಡಿವಿಜನ್‌ವಾರು ಓಡುತ್ತಿರುವ ಬಸ್ಸುಗಳೆಷ್ಟು? ಅವುಗಳಲ್ಲಿ ದುರಸ್ತಿಗೆ ಬಂದಿರುವ ಬಸ್ಸುಗಳು ಎಷ್ಟು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಕ.ರಾ.ರ. ಸಂಖ್ಯೆಯಲ್ಲಿ 19 ವಿಭಾಗಗಳಿವೆ. ಅವುಗಳ ವಿವರ ಪಟ್ಟಿ 'ಅ'ರಲ್ಲಿ ನಮೂದಿಸಿದೆ.

ಆ) ವಿಭಾಗವಾರು ವಾಹನಗಳ ಸ್ಥಿತಿ ಮತ್ತು ವಾಹನಗಳ ನಿಲುಗಡೆಯ ವಿವರ ಪಟ್ಟಿ 'ಅ'ನಲ್ಲಿ ನಮೂದಿಸಿದೆ.

ಪಟ್ಟಿ-'ಅ'

ಕ್ರಮ ಸಂಖ್ಯೆ	ವಿಭಾಗ	ಒಟ್ಟಾರೆ ಬಲ	ಒಟ್ಟಾರೆ ನಿಲುಗಡೆ ವಾಹನಗಳು
1.	ಬೆಂಗಳೂರು (ಕೇಂದ್ರ)	554	72
2.	ಬೆಂಗಳೂರು (ಗ್ರಾ)	332	28
3.	ಕೋಲಾರ	538	29
4.	ಮೈಸೂರು	742	24
5.	ಹಾಸನ	550	28